# ಅಂಗಿ ಗುಂಡಿಗಳ ಭಂಗಿ



■ ಕೆ.ರಾಮಚಂದ್ರ ಹೊಸಪೇಟೆ

ಗುಂಡಿಗಳಿಲ್ಲದೆ ಅಂಗಿಗಳಿಲ್ಲ. ಈಗ ಗುಂಡಿಗಳ ವಿನ್ಯಾಸದಲ್ಲೂ ಹೊಸ ಹೊಸ ಆವಿಷ್ಕಾರಗಳಾಗಿವೆ. ಜನಸಾಮಾನ್ಯರು ಈ ಗುಂಡಿಗಳ ಆವಿಷ್ಕಾರದ ಬಗ್ಗೆ ಅಷ್ಟು ತಲೆ ಕೆಡಿಸಿಕೊಂಡಿಲ್ಲ. ಅವರದ್ದೇನಿದ್ದರೂ ಷರ್ಟು, ಪ್ಯಾಂಟಿನ ಗುಂಡಿಗಳು ಕಳಚಿ ಬಿದ್ದಾಗಲಷ್ಟೇ ಚಿಂತೆ.

ಭಾರತದ ಸಿಂಧೂ ಕಣಿವೆ ನಾಗರಿಕತೆಯ ಜನ ಚಿಪ್ಪಿನಿಂದ ಕೊರೆದ ಗುಂಡಿಗಳನ್ನು ಮಾಡಿದ್ದು, ಆಭರಣವಾಗಿ ಬಳಸಿದ್ದು ಬೆಳಕಿಗೆ ಬಂದಿದೆ. ಕ್ರಿ.ಶ. 1300ರ ಸುಮಾರಿಗೆ ಫ್ರಾನ್ಸ್ ದೇಶದಲ್ಲಿ ಮೊದಲ ಬಾರಿಗೆ ಗುಂಡಿಗಳ ಆವಿಷ್ಕಾರವಾಯಿತು. ಬಟ್ಟೆ ಸಿದ್ಧ ಪಡಿಸುವ ದರ್ಜಿಗಳಿಗೆ ಇದು ತುಂಬಾ ನೆರವಾಯಿತು. ಗುಂಡಿ ಉತ್ಪಾದನೆಯಿಂದ ವ್ಯಾಪಾರಿಗಳೂ ಲಾಭ ಗಳಿಸತೊಡಗಿದರು. ಕಟ್ಟಿಗೆ, ಕೊಂಬು, ಲೋಹ, ದಂತ, ಬಂಗಾರ ಹಾಗೂ ಪ್ಲಾಸ್ಟಿಕ್ ಗಳಿಂದಲೂ ಗುಂಡಿಗಳು ಸಿದ್ಧವಾಗತೊಡಗಿದವು.



ಜನರ ಅಭಿರುಚಿಗೆ ತಕ್ಕಂತೆ ಗುಂಡಿಗಳು ಕಾಲಕಾಲಕ್ಕೆ ಬದಲಾಗುತ್ತಾ ಬಂದಿವೆ. ಚಟಪಟಿ ಗುಂಡಿ, ಜಿಪ್ಸ್ ಬರುವ ಮೊದಲು ಗುಂಡಿಗಳದ್ದೇ ದರಬಾರು. ಗುಂಡಿಗಳು ದೊಡ್ಡ ಮಟ್ಟದಲ್ಲಿ ಕಾರ್ಖಾನೆಗಳಲ್ಲಿ ತಯಾರಾಗತೊಡಗಿದವು. ಸೃಜನಶೀಲ ವಿನ್ಯಾಸದ ಉಡುಗೆ– ತೊಡುಗೆಗಳಿಗೆ ಗುಂಡಿಗಳು ಯಥೇಚ್ಛವಾಗಿ ಬಳಕೆಯಾಗತೊಡಗಿದವು. ಫ್ಯಾಷನ್ ಉಡುಗೆಗಳಲ್ಲಂತೂ ಅಲಂಕಾರಿಕವಾಗಿ ಗುಂಡಿಗಳ ಬಳಕೆ ಪ್ರಾರಂಭವಾಯಿತು. ಫ್ರಾನ್ಸ್ ದೇಶದ 16 ನೇ ಲೂಯಿ ತನ್ನ ಜೀವಿತಾವಧಿಯಲ್ಲಿ ಗುಂಡಿಗಳಿಗಾಗಿ ಸುಮಾರು 5 ದಶಲಕ್ಷ ಡಾಲರ್ ಖರ್ಚು ಮಾಡಿದ್ದನಂತೆ! 1824ರಲ್ಲಿ ಜಾರ್ಜ್ ವಾಷಿಂಗ್ಟನ್ ಭಾವಚಿತ್ರವಿರುವ ಬಂಗಾರದ ಗುಂಡಿಗಳನ್ನು ತಯಾರಿಸಲಾಗಿತ್ತು. ಅದನ್ನು ಮರಾಕ್ವೈಸ್ ಡಾ ಲಫ್ಯಾತ್ ಅಮೆರಿಕಾಗೆ ಭೇಟಿವಿತ್ತಾಗ ಅವರಿಗೆ ಕಾಣಿಕೆಯಾಗಿ ನೀಡಲಾಯಿತು ಎಂಬ ಉಲ್ಲೇಖವಿದೆ. 1860ರಲ್ಲಿ ಮೊದಲ ಬಾರಿಗೆ ಇಂಗ್ಲೆಂಡಿನಲ್ಲಿ ಪ್ಲಾಸ್ಟಿಕ್ ಗುಂಡಿಗಳು ಜಾರಿಗೆ ಬಂದು ಅಮೆಇಕದಲ್ಲಿ ಅದರ ಉತ್ಪಾದನಾ ಕೇಂದ್ರ ಸ್ಥಾಪಿತವಾಯಿತು.

ಭಾರತದಲ್ಲಿ 1977 ರಿಂದ ತಯಾರಾಗುವ 'ಏರೊ' ಎಂಟರ್ ಪ್ರೈಜಸ್ ಕಂಪನಿಯ ಗುಂಡಿಗಳು ಅನೇಕ ದೇಶಗಳಲ್ಲಿ ಮಾರಾಟ ಆಗುತ್ತಿವೆ.

### ಗುಂಡಿಗಳ ಬಗ್ಗೆ ಹಲವು ನಂಬಿಕೆ- ಅಪನಂಬಿಕೆಗಳಿವೆ:

★ ಕೆಲವು ದೇಶಗಳಲ್ಲಿ ಗುಂಡಿಗಳನ್ನು ಹಾಳು ಮಾಡುವುದು ಅಪರಾಧ ಎಂದು ಪರಿಗಣಿಸಲಾಗಿದೆ.
★ ಗ್ರೀಕಿನ ರೋಮನ್ನರು ಮೊದಮೊದಲು ಬಟ್ಟೆಗಳ ಮೇಲೆ ಅಲಂಕಾರಕ್ಕೆ ಗುಂಡಿಗಳನ್ನು ಬಳಸುತ್ತಿದ್ದರು.
★ ಯುರೋಪಿನ ಚರ್ಚ್ 'ಗುಂಡಿಗಳು ಸೈತಾನನ ಬಲೆ' ಎಂದು ಘೋಷಿಸಿದಾಗ ಅವುಗಳ ಬಳಕೆ ಕಡಿಮೆಯಾಗಿತ್ತು.
★ ಅಮೆರಿಕಾದ 'ಆಮಿಷ್' ಜನಾಂಗದವರು ತಮ್ಮ ಬಟ್ಟೆಗಳಿಗೆ ಗುಂಡಿಗಳನ್ನು ಬಳಸುವುದಿಲ್ಲ, ಅವರು ಗುಂಡಿಗಳನ್ನು 'ಪಾಪದ ಪ್ರತಿಷ್ಠೆ' ಎಂದು ಭಾವಿಸುತ್ತಾರೆ.
★ ಫ್ರಾನ್ಸ್ ದೇಶದ ಸೈನಿಕರ ಕೋಟಿನ ತೋಳುಗಳಿಗೆ ಗುಂಡಿಗಳನ್ನು ಹಾಕಲಾಗಿತ್ತು. ಏಕೆಂದರೆ ತೋಳಿನಿಂದ ಸೈನಿಕರು ಮೂಗು ಒರೆಸಿಕೊಳ್ಳಬಾರದು ಎನ್ನುವ ಕಾರಣ ಆಗ ಇತ್ತು. ಆದರೆ ಇಂದು ಅದು ಅಲಂಕಾರಿಕವಾಗಿ ಮುಂದುವರೆದಿದೆ.
★ ನ್ಯೂಯಾರ್ಕ್ ನಗರದಲ್ಲಿ 'ರಾಷ್ಟ್ರೀಯ ಗುಂಡಿಗಳ ಸೊಸೈಟಿ'ಯನ್ನು ೧೯೩೮ರಲ್ಲಿ ಸ್ಥಾಪಿಸಲಾಗಿದೆ. ಈ ವರ್ಷದ ಆಗಸ್ಟ್ ತಿಂಗಳಲ್ಲಿ ಅದು ತನ್ನ ವಜ್ರ ಮಹೋತ್ಸವವನ್ನು ಕೆನಡಾದ ಆಂಟಾರಿಯೊದಲ್ಲಿ ಆಚರಿಸಿಕೊಂಡಿದೆ.

ಈಗ ಹೇಳಿ; ಗುಂಡಿಗಳು ಸಾಮಾನ್ಯವೆ? ಅವುಗಳಿಗೂ ಅವುಗಳದ್ದೇ ಆದ ಇತಿಹಾಸ ಇಲ್ಲವೆ?